

# ಸ್ಲೋ ಚಾಂಪಿಯನ್

# ಬಸವನ ಹುಳು

ಭೂಮಿಯ ಮೇಲೆ ಅತ್ಯಂತ ವೇಗವಾಗಿ ಚಲಿಸುವ ಪ್ರಾಣಿಗಳಿರುವಂತೆಯೇ ಅತಿ ನಿಧಾನವಾಗಿ ಚಲಿಸುವ ಪ್ರಾಣಿಗಳೂ ಇವೆ. ಮಳೆಗಾಲದಲ್ಲಿ ಹೆಚ್ಚಾಗಿ ಕಾಣುವ ಬಸವನಹುಳು ಅತ್ಯಂತ ನಿಧಾನವಾಗಿ ಚಲಿಸುವ ಪ್ರಾಣಿ.

■ ವೀಣಾ ಶಂಕರ್

ಬಸವನಹುಳು ಸಾವಿರಾರು ವರ್ಷಗಳಿಂದ ಬದಲಾವಣೆಗಳನ್ನು ಹೊಂದುತ್ತಾ ಈಗಿನ ಆಕಾರವನ್ನು ಪಡೆದುಕೊಂಡಿವೆ. ಹಿಂದಿನ ಗುಂಪಿನ ಬಸವನ ಹುಳುಗಳು ಕೇವಲ ನೀರಿನಲ್ಲಿ ವಾಸಿಸುತ್ತಿದ್ದವು. ಕ್ರಮೇಣ ಇವುಗಳು ಬದಲಾವಣೆಯನ್ನು ಹೊಂದುತ್ತಾ ನೆಲದ ಮೇಲೆ ವಾಸಿಸುವ ಶಕ್ತಿಯನ್ನು ಬೆಳೆಸಿಕೊಂಡವು.

ಒಟ್ಟು ಮೂರು ತರಹದ ಬಸವನ ಹುಳುಗಳಿವೆ. ಅವು ನೆಲ, ಸಮುದ್ರ ಹಾಗೂ ಸಿಹಿ ನೀರಿನಲ್ಲಿ ವಾಸಿಸುವಂತಹವು. ಚಿಪ್ಪು ಇಲ್ಲದಿರುವ ಕೆಲವು ಬಸವನ ಹುಳುಗಳಿಗೆ 'ಸ್ಲಗ್' ಎಂದು ಕರೆಯುತ್ತಾರೆ.

ಬಸವನಹುಳುವಿನ ನಡಿಗೆಯನ್ನು ನೋಡಲೂ ತಾಳ್ಮೆ ಬೇಕು. ಅಷ್ಟೊಂದು ನಿಧಾನ. ಇದರ ಮೈಮೇಲೆ ಅಂಟಿನಂತಹ ಪದಾರ್ಥವಿರುತ್ತದೆ.

ಕೆಲವು ಬಸವನ ಹುಳುಗಳು ಗಂಟೆಗೆ 150 ಅಡಿ ಚಲಿಸುತ್ತದೆ. ಅತಿ ವೇಗವಾಗಿ ಚಲಿಸುವ ಕೆಲವು ಬಸವನ ಹುಳುಗಳು 3 ನಿಮಿಷಕ್ಕೆ 2 ಅಡಿಗಳಷ್ಟು ಚಲಿಸುತ್ತವೆ. ಅಂದರೆ ಗಂಟೆಗೆ 40 ಅಡಿ ಚಲಿಸುತ್ತದೆ. ಒಂದು ಗಂಟೆಗೆ ಕೇವಲ 2 ಅಡಿ ಮಾತ್ರ ಚಲಿಸುವ ಅತ್ಯಂತ ನಿಧಾನದ ಬಸವನ ಹುಳುಗಳೂ ಇವೆ!

ಆದರೆ ಅಪಾಯದ ಮುನ್ಸೂಚನೆ ಬಂದರೆ ಬಸವನ ಹುಳುಗಳು ಸ್ವಲ್ಪ ವೇಗವಾಗಿ ಚಲಿಸುವುದೂ ಇದೆ. ಅಪಾಯವೇನಾದರೂ ಆಗುತ್ತದೆ ಎಂದು ಮುನ್ಸೂಚನೆ ಸಿಕ್ಕ ತಕ್ಷಣವೇ ತನ್ನ ತಲೆಯನ್ನು ಚಿಪ್ಪಿನೊಳಗೆ ಹಾಕಿ ತನ್ನ ಮೈಯನ್ನು ಅರ್ಧದಷ್ಟಕ್ಕೆ ಮಡಚಿಕೊಳ್ಳುತ್ತದೆ! ಇವುಗಳ ಹಿಡಿತ ಅತಿ ಶಕ್ತಿಯುತವಾಗಿರುತ್ತದೆ.

ನಿಧಾನಕ್ಕೇ ಆದರೂ ಬಸವನ ಹುಳುಗಳು ಸಾಕಷ್ಟು ದೂರ ಹೋಗುತ್ತವೆ. ಎಷ್ಟೋ ಸಲ ಸಲ ಇವುಗಳು ದೋಣಿಗೆ ಅಂಟಿಕೊಂಡು ಪ್ರವಾಸ ಕೈಗೊಳ್ಳುತ್ತವೆ. ಒಂದು ಬಾರಿಗೆ 100–150 ಮೊಟ್ಟೆಗಳನ್ನು ಇಡುವ ಬಸವನಹುಳುಗಳು ರೈತನಿಗೆ ದೊಡ್ಡ ಶತ್ರು.

ಬಸವನಹುಳುವಿನಿಂದ ತಮ್ಮ ಬೆಳೆ ರಕ್ಷಿಸಲು ರೈತರು ಉಪ್ಪನ್ನು ಸಿಂಪಡಿಸುತ್ತಾರೆ. ಬಸವನ ಹುಳುವಿನ ದೇಹದಲ್ಲಿನ ನೀರನ್ನು ಉಪ್ಪು ಹೀರಿಕೊಂಡು ಇವುಗಳ ಸಾವಿಗೆ ಕಾರಣವಾಗುತ್ತದೆ. ಆಫ್ರಿಕಾದಲ್ಲಿ ಬಸವನ ಹುಳುಗಳನ್ನು ಆಹಾರವನ್ನಾಗಿಯೂ ಉಪಯೋಗಿಸುತ್ತಾರೆ.

